ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಕವಿಪ್ರನಿನಿ/ಬಿ9/85292/18-19

ದಿನಾಂಕ : 06 MAY 2020

ಮುಖ್ಯ ಇಂಜಿನಿಯರ್ (ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಹಾಸನ.

ಮಾನ್ಯರೇ,

**ವಿಷಯ:-** ಮಡಿಕೇರಿ ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕು, ಗುಡುಗಳಲೆ ಗ್ರಾಮದ ಸರ್ವೆ ಸಂಖ್ಯೆ 20/1ಪಿ1 ನಲ್ಲಿ (ಶನಿವಾರ ಸಂತೆ) ಕವಿಪ್ರನಿನಿಯ 66/11ಕೆ.ವಿ ಉಪಕೇಂದ್ರದ ಆವರಣದಲ್ಲಿ ಚಾ.ವಿ.ಸ.ನಿ.ನಿ ಗೆ ವಸತಿ ಗೃಹಗಳನ್ನು ನಿರ್ಮಿಸಲು 2703.75 ಚದುರ ಮೀಟರ್ ವಿಸ್ತೀರ್ಣದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

**ಉಲ್ಲೇಖ:-**
1. ಮು.ಇಂ(ವಿ)/ಪ್ರವ/ಹಾಸನ/ಕಾ.ನಿ.ಇಂ(ಸಿ)/19-20/8010-13 ದಿನಾಂಕ19/08/2019
2. ದಿನಾಂಕ 11/3/2020 ರ ಕವಿಪ್ರನಿನಿ 119ನೇ ಮಂಡಳಿ ಸಭೆಯ ನಡವಳಿಗಳು.

****************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಡಿಕೇರಿ ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕು, ಗುಡುಗಳಲೆ ಗ್ರಾಮದ ಸರ್ವೆ ಸಂಖ್ಯೆ 20/1ಪಿ1 ನಲ್ಲಿ (ಶನಿವಾರ ಸಂತೆ) ಕವಿಪ್ರನಿನಿಯ 66/11ಕೆ.ವಿ ಉಪಕೇಂದ್ರದ ಆವರಣದಲ್ಲಿ ಚಾ.ವಿ.ಸ.ನಿ.ನಿ ವಸತಿ ಗೃಹಗಳನ್ನು ನಿರ್ಮಿಸಲು 2703.75 ಚದುರ ಮೀಟರ್ ವಿಸ್ತೀರ್ಣದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ ನಿಮ್ಮ ಶಿಫಾರಸ್ಸಿನ ಮೇರೆಗೆ ಹಾಗೂ ದಿನಾಂಕ 11/3/2020 ರಂದು ನಡೆದ ಕವಿಪ್ರನಿನಿ 119 ನೇ ಮಂಡಳಿ ಸಭೆಯ ನಿರ್ಣಯದಂತೆ, ಈ ಕೆಳಕಂಡ ಷರತ್ತುಗಳನ್ವಯ, ಚಾವಿಸನಿನಿಗೆ ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ ನೀಡಿದೆ.

| ಕ್ರ ಸಂ | ಉಪಕೇಂದದ ಆವರಣ | ಲೀಸ್ ನೀಡುವ ಜಾಗದ ವಿಸ್ತೀರ್ಣ | ಷರಾ |
|---|---|---|---|
| 1 | 66/11ಕೆ.ವಿ ಶನಿವಾರ ಸಂತೆ | 36.00 ಮೀ X 75.00 ಮೀ (2703.75 ಚದುರ ಮೀಟರ್) | ವಸತಿ ಗೃಹಗಳನ್ನು ನಿರ್ಮಿಸಲು |

1. ಸದರಿ ಜಾಗಗಳನ್ನು ಚಾವಿಸನಿನಿ ಯ ವಸತಿ ಗೃಹ ಕಟ್ಟಡಗಳ ನಿರ್ಮಾಣಕ್ಕಾಗಿ ಉಲ್ಲೇಖದ ಪತ್ರದ ಅಡಕದಲ್ಲಿನ ರೇಖಾ ಚಿತ್ರದಲ್ಲಿ ಗುರುತಿಸಿರುವಂತೆ, ಚಾವಿಸನಿನಿ ಗೆ ಲೀಸ್ ಆಧಾರದ ಮೇಲೆ **30 ವರ್ಷಗಳ ಅವಧಿಗೆ** ನೀಡಲು ಅನುಮೋದಿಸಿದೆ.
2. ಚಾವಿಸನಿನಿಗೆ ನೀಡುವ ಮೇಲೆ ತಿಳಿಸಿದ ಜಾಗಗಳನ್ನು ಗುರುತಿಸಿ, ಎಲ್ಲೆ ಕಲ್ಲುಗಳನ್ನು ಹಾಕಿ, ನಿಗಮದ ಯಾವುದೆ ವ್ಯವಸ್ಥೆಗಳಿಗೆ ದಕ್ಕೆಯಾಗದಂತೆ, ಸದರಿ ಜಾಗಗಳನ್ನು ನೀಡುವುದು.
3. ಸದರಿ ಜಾಗಗಳ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತಗಳನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಚಾವಿಸನಿನಿ ಗೆ ಸೂಚಿಸುವುದು.

4. ಸದರಿ ಲೀಸ್ ಮೊತ್ತಗಳನ್ನು, ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಮುಂದುವರೆದಂತೆ, ವಾರ್ಷಿಕ ಲೀಸ್ ಮೊತ್ತಗಳನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಸಂಬಂಧಪಟ್ಟ ಟಿಎಲ್ ಮತ್ತು ಎಸ್ಎಸ್ ವಿಭಾಗಕ್ಕೆ ಪಾವತಿಸುವಂತೆ ಸೂಚಿಸುವುದು.
5. ಚಾವಿಸನಿನಿ ಗೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.
6. ಚಾವಿಸನಿನಿ ಗೆ ನೀಡಲು ಅನುಮೋದಿಸಿರುವ ಜಾಗಗಳನ್ನು ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.
7. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ಹೊಳೆನರಸೀಪುರ ರವರು ಚಾವಿಸನಿನಿ ನೊಂದಿಗೆ ಲೀಸ್ ಒಪ್ಪಂದದ ಕರಾರನ್ನು ಮಾಡಿಕೊಳ್ಳುವುದು.
8. ಸದರಿ ಜಾಗವನ್ನು ನಿಗಮದ ಲಿಖಿತ ಅನುಮೋದನೆ ಇಲ್ಲದೆ, ಬೇರೆ ಯಾರಿಗೂ ಪರಭಾರೆ ಮಾಡಬಾರದೆಂಬ ಷರತ್ತು ವಿಧಿಸುವುದು ಹಾಗೂ ಲೀಸ್ ಮಾಡಲಾದ ಜಾಗವನ್ನು ಬೇರೆಯವರಿಂದ ಒತ್ತುವರಿಯಾಗದಂತೆ ನೋಡಿಕೊಳ್ಳುವಂತೆ ಸೂಚಿಸುವುದು.
9. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ಹೊಳೆನರಸೀಪುರ ರವರು ಸದರಿ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಿರುವ ಬಗ್ಗೆ, ನಿಗಮದ ಲೆಕ್ಕ ಪುಸ್ತಕದಲ್ಲಿ ಅಗತ್ಯ ದಾಖಲಾತಿಗಳನ್ನು ಮಾಡುವುದು.

ಚಾವಿಸನಿನಿ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ನಿಗಮದ ದಿನಾಂಕ 24/04/2005 ರ ಆದೇಶ ಹಾಗೂ 26/10/2006 ರ ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಾವಳಿಗಳನ್ವಯ, ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ನಿಮ್ಮ ವಿಶ್ವಾಸಿ,
ಸಹಿ/-

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.
2. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್ (ವಿ), (ಕಾ ಮತ್ತು ಪಾ) ವಲಯ, ಚಾವಿಸನಿನಿ, ಹಾಸನ.
5. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಹಾಸನ.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
8. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ಹೊಳೆನರಸೀಪುರ.
9. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.

ನಿರ್ದೇಶಕರು (ತಾ ಮತ್ತು ಮಾ. ಸಂ)
ಕವಿಪ್ರನಿನಿ, ಬೆಂಗಳೂರು.